sdmimd

# Andolana

**Date:** August 22, 2015 **Page No.** 02

**Edition:** Mysore **Language: Kannada**

# ಸರ್ಕಾರಗಳು ಹೂಡಿಕೆಗೆ ಮುಂದಾಗಲಿ

## ಅಂತಾರಾಷ್ಟ್ರೀಯ ಆರ್ಥಿಕ ಸಮ್ಮೇಳನ ಉದ್ಘಾಟಿಸಿ ಶ್ರೀಕಾಂತ್ ಭಾಗವತ್



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನಲ್ಲಿ ಆಯೋಜಿಸಿರುವ 'ಎರಡು ದಿನಗಳ ಅಂತಾರಾಷ್ಟ್ರೀಯ ಆರ್ಥಿಕ ಸಮ್ಮೇಳನವನ್ನು ಶ್ರೀಕಾಂತ್ ಭಾಗವತ್ ಉದ್ಘಾಟಿಸಿದರು.

ಮೈಸೂರು,ಆ.೨೧-ದೇಶದ ಹಿತದೃಷ್ಟಿಯಿಂದಾಗಿ ಸರ್ಕಾರಗಳು ಕೈಗಾರಿಕಾ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹೂಡಿಕೆಗೆ ಮುಂದಾಗಬೇಕು. ಅಂತೆಯೇ ಇತರರು ಬಂಡವಾಳ ಹೂಡುವಂತೆ ಉತ್ತೇಜಿಸಬೇಕು ಎಂದು ಬೆಂಗಳೂರಿನ ಹೆಕ್ಸಾಗನ್ ವೆಲ್ತ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಭಾಗವತ್ ಸಲಹೆಯಿತ್ತರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನಲ್ಲಿ ಆಯೋಜಿಸಿರುವ 'ಆರ್ಥಿಕ ಹಾಗೂ ಲೆಕ್ಕಪತ್ರ ವಿಷಯಗಳಲ್ಲಿ ಉದಯೋನ್ಮುಖ ಪ್ರವೃತ್ತಿಗಳು' ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಆರ್ಥಿಕ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಭಾರತಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಬಂಡವಾಳ ಹರಿದು ಬರುತ್ತಿಲ್ಲ. ಇದೇ ರೀತಿ ಮುಂದುವರಿದರೆ ದೇಶದ ಕೈಗಾರಿಕಾ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಆದ್ದರಿಂದ ಸರ್ಕಾರ ಹಲವು ಕ್ಷೇತ್ರಗಳಲ್ಲಿ ಹೂಡಿಕೆಗೆ ಮುಂದಾಗಬೇಕಿದ್ದು, ಇತರರಿಗೂ ಹಣ ಕಾಸು ಹೂಡಲು ಉತ್ತೇಜನ ನೀಡಬೇಕು. ಇದರೊಂದಿಗೆ ಕೈಗಾರಿಕಾ ಅನ್ವೇಷಣೆ ಮತ್ತು ತಾಂತ್ರಿಕ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ ಎಂದರು.

ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

International finance conference